ಆಗದವಳು ಈಗ ಮನೆಗೆ ಬರ್ತೀವಿ ಅಂದರೆ ಒಪ್ಪಲ್ಲ. ಅವಳಿಗೆ ಇಷ್ಟವಿಲ್ಲ. ನಾನೇನು ಮಾಡಲಿ ನೀನೇ ಹೇಳು' ಎಂದರು.

'ಡಾಕ್ಟರ್ ಹೇಳೋವರೆಗೂ ಅವರು ಇಲ್ಲೇ ಇರಬೇಕಾಗುತ್ತದೆ ಮಾವ. ಹೇಗೂ ಜಗದೀಶ ಬರ್ತಿದ್ದಾನೆ. ಅವನೇ ನಿರ್ಧರಿಸಲಿ' ಎಂದೆ. ಮಾವ ಮರುದಿನ ಊರಿಗೆ ಹೊರಟು ಹೋದರು. ಅಪ್ಪ



ಚೇತರಿಸಿಕೊಂಡರು. ಅಮ್ಮನೇ ಅತ್ತು ಕೊರಗಿ ಬಿಪಿ ಏರಿ ಅವಳೇ ಮತ್ತಷ್ಟು ಮೆತ್ತಗಾದಳು.

ಆಪರೇಷನ್ ಆಗಿ ಎರಡು ತಿಂಗಳು ತುಂಬುವ ಹೊತ್ತಿಗೆ ಕ್ಯಾಲಿಫೋರ್ನಿಯಾದಿಂದ ಜಗದೀಶ ಬಂದ. ಅಪ್ಪಅಮ್ಮನಿಗೆ ಸ್ವರ್ಗವೇ ಸಿಕ್ಕಷ್ಟು ಹಿಗ್ಗು. ಮಗನನ್ನು ತಬ್ಬಿಕೊಂಡರು ಪ್ರೀತಿಯ ಧಾರೆ ಸುರಿಸಿ ಎಲ್ಲಾ ವಿವರ ಹೇಳಿದರು. ಅವರು ಅವನಿಗೆ ಅತೀ ಪ್ರೀತಿ ತೋರುತ್ತಿದ್ದುದು ನನಗೀಗ ಅಸೂಯೆ ಅನ್ನಿಸಲಿಲ್ಲ. ಆದರೆ ನನ್ನೊಂದಿಗಿನ ಅವರ ನಡತೆ ನೆನಪಾಗಿ ಬೇಸರವಾಯಿತಷ್ಟೇ.

ಜಗದೀಶನೇ, 'ಮೈತ್ರಿ, ಅಪ್ಪಅಮ್ಮನ ಜವಾಬ್ದಾರಿ ಹೊತ್ತು ನಿರ್ವಹಿಸಿದ್ದೀ. ಯು ಆರ್ ಗ್ರೇಟ್' ಅಂದ. ನಾನು ಮಾತಾಡದೇ ನಕ್ಕುಬಿಟ್ಟೆ.

ಅವನೇ, 'ಮೈತ್ರಿ, ವಿಶ್ವನಾಥ ಸಿಕ್ಕಿದ್ದ. ಹೆಂಡತಿಯೂ ಜೊತೆಗಿದ್ದಳು. ಏನೇನೆಲ್ಲಾ ಮಾತಾಡಿದ. ನಿನ್ನನ್ನು ಮಗನನ್ನು ವಿಚಾರಿಸಲೇ ಇಲ್ಲ' ಎಂದ.

'ಜಗೂ, ನಾನು ನಡತೆಗೆಟ್ಟವಳು ಅಂತ ಏನೆಲ್ಲಾ ಸಾಕ್ಷಿ, ಸೃಷ್ಟಿಸಿದ ಫೋಟೋಗಳನ್ನು ಕೋರ್ಟಿಗೆ ಕೊಟ್ಟಿದ್ದ. ನನಗೆ ಹೇಸಿಗೆಯಾಗಿ ಅವನ ಜೊತೆಗೆ ಬಾಳಲು ಸಾಧ್ಯವೇ ಇಲ್ಲ ಡೈವೋರ್ಸ್ ಕೊಡಿ ಎಂದಿದ್ದೆ. ನನ್ನ ಬಸಿರು ಅವನದ್ದಲ್ಲ ಎಂದಿದ್ದ. ನಾನು ಡಿಎನ್ಎ ಟೆಸ್ಟ್ ಮಾಡಿಸಬಹುದಿತ್ತು. ನನ್ನ ಪಾಲಿಗೆ ಅವನೆಂದೋ ಸತ್ತುಹೋದ. ಮಗನಿಗೂ ಅವನಪ್ಪ ಬದುಕಿಲ್ಲ ಎಂದೇ ಹೇಳಿದ್ದೇನೆ. ಅಪ್ಪಅಮ್ಮ ಅಂದು ನನ್ನನ್ನು ತಿರುಗಿಯೂ ನೋಡಲಿಲ್ಲ. ಗೌರಕ್ಕ, ಗಿರೀಶ್ ಭಾವ, ಅಕ್ಕ ಇರದಿದ್ದರೆ ನನ್ನ ಗತಿ ಏನಾಗ್ತಿತ್ತೋ ಏನೋ?'

'ಮೈತ್ರಿ, ನೀನು ಗಟ್ಟಿಗಿತ್ತಿ. ಬದುಕನ್ನು ಎದುರಿಸಿ ಗೆದ್ದೆ' ಅಂದ.

ಜಗದೀಶ ತನ್ನ ಉದ್ಯೋಗದ ಬಗ್ಗೆ ತನ್ನ ಹೆಂಡತಿ ಅಮೃತಾ ಕೌರ್ ಬಗ್ಗೆ ಮಕ್ಕಳು ಸಾನ್ವಿ, ವಿವೇಕರ ಬಗ್ಗೆ ಹೇಳಿದ.

'ಅಮೃತಾ ಭಾರತೀಯ ಮೂಲದ ಅಮೆರಿಕನ್ ಸಂಜಾತೆ. ಅವಳ ತಂದೆ, ತಾಯಿ, ಬಂಧುಗಳೆಲ್ಲಾ ಅಲ್ಲೇ ಇದ್ದಾರೆ. ಹಾಗಾಗಿ ನಾನು ಇಂಡಿಯಾಕ್ಕೆ ಬರೋದು ಸಾಧ್ಯವೇ ಇಲ್ಲ. ಆದಾಗ ಬರಬಲ್ಲೆ, ಹಣ ಕೊಡಬಲ್ಲೆ ಇನ್ನೇನು ಮಾಡಲಿ?' ಅಂದ.

ನಾನು ರಾಜಶೇಖರ ಮಾವನ ಬಗ್ಗೆ, ಜಯಕ್ಕ, ಲೀಲಕ್ಕರ ಬಗ್ಗೆ ಹೇಳಿದೆ.

'ಅವರ್‍ಯಾರೂ ಜವಾಬ್ದಾರಿ ಹೊರಲ್ಲ. ನಾನು ಖರ್ಚು ಕೊಡ್ತೇನೆ ಅಪ್ಪ, ಅಮ್ಮನ ಜವಾಬ್ದಾರಿ ಹೊರ್ತೀಯಾ?' ಎಂದು ಆರ್ತನಾಗಿ ಕೇಳಿದ.

'ಅವರದ್ದೂ, ನಿನ್ನದೂ ಹಣ ಬಿಡಿಗಾಸೂ ನನಗೆ ಬೇಡ. ಗೌರಕ್ಕ ಮನೆಯ ಸಂಪೂರ್ಣ ಜವಾಬ್ದಾರಿ ಹೊತ್ತಿದ್ದಾರೆ. ನಾನು ಅಪ್ಪಅಮ್ಮನನ್ನು ಪ್ರೀತಿಯಿಂದ ನೋಡಿಕೊಳ್ತೀನಿ. ಎಲ್ಲ ವಿಷಯ ಅವರಿಗೆ ಹೇಳು. ನಾನು ಆಫೀಸಿಗೆ ಹೋದಮೇಲೆ ಮಾತಾಡು' ಎಂದವಳು ಆಫೀಸಿಗೆ ಹೊರಟು ಹೋದೆ.

ಹಿಂದಿರುಗಿ ಬಂದಾಗ ಮನೆ ಶಾಂತವಾಗಿತ್ತು. ಅಮ್ಮ ಎದ್ದು ಬಂದು ನನ್ನನ್ನು ತಬ್ಬಿದಳು. ಅಪ್ಪ ಎದ್ದು ಬಂದು ನನ್ನ ತಲೆ ಸವರಿದರು. 'ಮೈತ್ರಿ, ನೀನು ನನಗೆ ಮಗಳಲ್ಲ ಮಗ' ಎಂದರು.

'ಇಲ್ಲ ಅಪ್ಪಾ, ಮಗ, ಮಗಳು ಇಬ್ಬರೂ ಸಮಾನರು. ಆತ್ಮಕ್ಕೆ ಗಂಡು, ಹೆಣ್ಣು ಎಂದಿಲ್ಲ. ನಡುವೆ ಸುಳಿವಾತ್ಮ ಗಂಡೂ ಅಲ್ಲ, ಹೆಣ್ಣೂ ಅಲ್ಲ. ನಾವು ಮಕ್ಕಳು. ನೀವು ಹೆತ್ತವರು' ಎಂದೆ. ಅಪ್ಪ ಮಾತಾಡದೆ ತಬ್ಬಿದರು. ●